ಒ.ಎಸ್.ನಂ:59/2018
ಪಿ.ಡಬ್ಲೂ.1

**ದಿ:29.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:-**ಪ್ರತಿವಾದಿ ಪರ ಶ್ರೀ. **D.P.K.,** ವಕೀಲರಿಂದ:-

ನಾನು ನಿಪಿ 11 ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವದಲ್ಲೇ ಪರಿಶೀಲನೆ ಮಾಡಿರುತ್ತೇನೆ . ನಾನು ಪರಿಶೀಲನೆ ಮಾಡಿದ ಸಂದರ್ಬದಲ್ಲಿ ನಿಪಿ 11 ರಲ್ಲಿ ಸರ್ವೆ ನಂಬರ್ 9/5 ರ ಜಮೀನು ಜಿ ಬಸವನಗೌಡ ತಂದೆ ಲಿಂಗಪ್ಪಗೌಡ ಎಂಬುವವರ ಹೆಸರಿಗೆ 1 ಎಕರೆ 12 ಗುಂಟೆ ಮತ್ತು ಸರ್ವೆ ನಂಬರ್ 9/5 ರಲ್ಲಿ ಜಿ ಬಿ ಕರಿಬಸವನಗೌಡ ಬಿನ್ ಜಿ ಬಸವನಗೌಡ ಎಂಬುವವರ ಹೆಸರಿಗೆ 20 ಗುಂಟೆ ನಮೂದು ಇದ್ದ ಬಗ್ಗೆ ನನಗೆ ತಿಳಿದಿರುತ್ತದೆ . ಸದರಿ ಜಿ ಬಸವನಗೌಡ ರವರ ನನಗೆ ದೊಡ್ಡಪ್ಪ ಆಗಬೇಕು ಮತ್ತು ಜಿ ಬಿ ಕರಿಬಸವನಗೌಡರವರು ದೊಡ್ಡಪ್ಪರವರ ಮಗ ಆಗಬೇಕು . ಸದರಿ ನಿಪಿ 11 ರಲ್ಲಿ ಸರ್ವೆ ನಂಬರ್ 9/4 ಪ್ರತಿವಾದಿ 1 ರವರ ಹೆಸರಿಗೆ ಜಂಟಿ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ 9 ರಲ್ಲಿ ಸರ್ವೆ ನಂಬರ್ 3/6 ರಲ್ಲಿ ಬಸಮ್ಮ ಕೋಂ ನಿಂಗಪ್ಪ ರವರ ಹೆಸರಿಗೆ 1 ಎಕರೆ 39 ಗುಂಟೆ ನಮೂದು ಇರುತ್ತದೆ ಎಂದರೆ ಸರಿ. ಸದರಿ ಬಸಮ್ಮ ಕೋಂ ನಿಂಗಪ್ಪ ರವರು ನನಗೆ ಅಜ್ಜಿ ಆಗಬೇಕು . ನಿಪಿ 9 ರಲ್ಲಿ ಸರ್ವೆ ನಂಬರ್ 3/2 ಎ ರಲ್ಲಿ 2 ಎಕರೆ ಜಮೀನು ಮೃತ ವಾದಿ 1 ಮತ್ತು ಪ್ರತಿವಾದಿ 1 ರವರ ಹೆಸರಿಗೆ ಜಂಟಿ ಇರುತ್ತದೆ ಎಂದರೆ ಸರಿ. ನಿಪಿ 1 ಮತ್ತು 2 ಪಹಣಿಗಳಲ್ಲಿ ಜಿ ಮಲ್ಲಿಕಾರ್ಜುನಪ್ಪ ತಂದೆ ನಿಂಗಪ್ಪ ಎಂದು ಅವರ ಹೆಸರಿಗೆ ನಮೂದು ಇರುತ್ತದೆ ಎಂದರೆ ಸರಿ. ನಿಪಿ 4 ರಲ್ಲಿ 3 ಎಕರೆ 39 ಗುಂಟೆ ಜಿ ಮಲ್ಲಿಕಾರ್ಜುನಪ್ಪರವರ ಅವರ ಹೆಸರಿಗೆ ನಮೂದು ಇರುತ್ತದೆ ಎಂದರೆ ಸರಿ. ನಿಪಿ 5 ರ ಪ್ರಕಾರ ಸರ್ವೆ ನಂಬರ್ 9/2 ರಲ್ಲಿ 9 ಎಕರೆ 7 ಗುಂಟೆ ಆಸ್ತಿಯು ಮೊದಲಿಗೆ ಲಿಂಗಣ್ಣಗೌಡ ರವರ ಹೆಸರಿಗೆ ಇದ್ದು ನಂತರ ಮಲ್ಲಿಕಾರ್ಜುನಗೌಡ ಅವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ನಿಪಿ 7 ರಂತೆ ಸರ್ವೆ ನಂಬರ್ 9/2 ಪಿ ರಲ್ಲಿ 2 ಎಕರೆ ವಿಸ್ತೀರ್ಣ ದಆಸ್ತಿಯು ಮಲ್ಲಿಕಾರ್ಜುನಪ್ಪ ರವರ ಹೆಸರಿಗೆ ನಮೂದು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ನಮ್ಮ ತಂದೆಗೆ ಪಹಣಿಯು ಮುಂದೂಡುತ್ತಾ ಬಂದಿರುತ್ತದೆ ಎಂದರೆ ಸರಿ. ನಿಪಿ 8 ರಲ್ಲಿ ಸರ್ವೆ ನಂಬರ್ 9/2 ಮಲ್ಲಿಕಾರ್ಜುನಪ್ಪರವರಿಗೆ ಪಟ್ಟಿ ಪಾಲುವಿಭಾಗ ಪ್ರಕಾರ ಖಾತೆ

ವರ್ಗಾವಣೆ ಆಗಿರುವುದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ಆವಾಗ ನೊಂದಾವಣೆ ವಿಭಾಗ ಪತ್ರ ಇರುವುದಿಲ್ಲ ಎಂದು ಹೇಳುತ್ತಾರೆ . ನಿಪಿ 15 ದಾಖಲೆಯನ್ನು ನಾನು ಪ್ರತಿವಾದಿ ಹಾಜರುಪಡಿಸಲು ಮಧ್ಯಂತರ ಅರ್ಜಿ ಆದೇಶದಂತೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ . ನಿಪಿ 15 ರಂತೆ ಸರ್ವೆ ನಂಬರ್ 112/5 ಮತ್ತು 112/6 ಜಮೀನುಗಳು ನನಗೆ ನನ್ನ ತಾಯಿ ಕಡೆಯಿಂದ ದಾನವಾಗಿ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ಅವರು ನಮ್ಮ ತಾಯಿಗೆ ತಮ್ಮ ತವರು ಮನೆಯಿಂದ ಬಂದಿರುತ್ತದೆ ಎಂದು ಹೇಳುತ್ತಾರೆ . ಸದರಿ ಆಸ್ತಿಗಳು ಕೂಡ ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿಯೂ ಮಲ್ಲಿಕಾರ್ಜುನಪ್ಪರವರ ಎಲ್ಲಾ ವಾರಸುದಾರರಿಗೆ ಸಮಾನವಾದ ಹಕ್ಕುವು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಈ ದಾವೆಯಲ್ಲಿ ಹೆಚ್ಚುವರಿ ತಕರಾರು ಹಾಕಿರುವುದನ್ನು ನಾನು ತಿಳಿದುಕೊಂಡಿರುತ್ತೇನೆ . ಸದರಿ ತಕರಾರಿನಲ್ಲಿ ಸರ್ವೆ ನಂಬರ್ 112/5 ಮತ್ತು 112/6 ಜಮೀನುಗಳು ಒಟ್ಟು ಕುಟುಂಬದ ಆಸ್ತಿ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ನಿಪಿ 15 ರ ದಾನಪತ್ರದಲ್ಲಿ ನಮೂದಾಗಿರುವ ಎಲ್ಲಾ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ . ನಿಪಿ 15 ರಲ್ಲಿ ನಮ್ಮ ತಾಯಿಯವರು ಎಲ್ಲಿಯೂ ಸಹ ತಮಗೆ ಸ್ವಂತ ಜಮೀನು ಇರುತ್ತದೆ ಎಂದು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 15 ರಲ್ಲಿ ನನ್ನ ತಾಯಿಯು ತನ್ನ ಸ್ವಂತ ಜಮೀನು ಎಂದು ಹೇಳಿ ಎಂದು ಬರೆಸಿರುವುದಿಲ್ಲ , ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ॥ 25.04.2014 ರಂದು ನಮ್ಮ ತಾಯಿಯ ಆರೋಗ್ಯ ಹೇಗೆ ಇತ್ತು ಎಂಬ ಬಗ್ಗೆ ಯಾವುದೇ ದಾಖಲೆಗಳನು ಹಾಜರುಪಡಿಸಿರುವುದಿಲ್ಲ . ದಿ॥ 03.03.2016 ರಂದು ಪ್ರತಿವಾದಿ 1 ಮತ್ತು 3 ರವರ ಹೆಸರಿಗೆ ದಾನ ಪತ್ರ ಆದ ಕಾಲಕ್ಕೆ ನಾನು ಹಾಜರು ಇರುವುದಿಲ್ಲ . ನಾವು ಹಾಜರಾಗಿದ ಕಾರಣ ಸದರಿ ದಾನಪತ್ರಕ್ಕೆ ಯಾರು ಮಾಹಿತಿ ನೀಡಿರುವ ಬಗ್ಗೆ ನನಗೆ ನಿಖರವಾಗಿ ಗೊತ್ತಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ನಮ್ಮ ತಾಯಿ ಮೂಲಕ ತಿಳಿದುಕೊಂಡಿರುತ್ತೇನೆ ಎಂದು ಹೇಳುತ್ತಾರೆ . ನನಗೆ ನಿಪಿ 15 ಅನ್ನು ನೊಂದಾಣಿ ಮಾಡವ ಸಂದರ್ಬದಲ್ಲಿ ನೊಂದಾಯಿತ ಕಛೇರಿಯಲ್ಲಿ ಯಾವ ಪ್ರಕ್ರಿಯೆ ಮಾಡಿರುವ ಬಗ್ಗೆ ಮಾಹಿತಿ ಇರುತ್ತದೆ . ಸಾಮಾನ್ಯವಾಗಿ ಪತ್ರ ಬರಹಗಾರರು ಆಸ್ತಿಯ ಮಾಲೀಕರು ಮಾಹಿತಿಯನ್ನು ನೀಡಿದ ಪ್ರಕಾರ

ಪತ್ರ ತಯಾರಿಸುತ್ತಾರೆ ಎಂದರೆ ಸರಿ. ಪತ್ರ ತಯಾರಾದ ನಂತರ ಪತ್ರ ಬರಹಗಾರರ ಸದರಿ ಪತ್ರಗಳನ್ನು ಓದಿ ಮಾಲೀಕರಿಗೆ ತಿಳಿಸುತ್ತಾರೆ ಎಂದರೆ ಸರಿ. ನಂತರ ಪತ್ರ ಬರೆಸಿಕೊಂಡವರು ಸರಿ ಇದೆ ಎಂದು ಹೇಳಿದ ನಂತರ ತಮ್ಮ ಸಹಿಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಆ ನಂತರ ಸಾಕ್ಷಿದಾರರು ಸಬ್ ರಿಜಿಸ್ಟರ್ ರವರ ಸಮಕ್ಷಮದಲ್ಲಿ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ನಂತರ ಸಬ್ ರಿಜಿಸ್ಟರ್ ರವರು ಪಕ್ಷಗಾರರ ಹೆಬ್ಬೆಟಿನ ಗುರುತನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಸಾಕ್ಷಿದಾರರ ಸಹಿಯನ್ನು ಸಬ್ ರಿಜಿಸ್ಟರ್ ಸಮಕ್ಷಮದಲ್ಲೇ ತಗೆದುಕೊಳ್ಳುತ್ತಾರೆ ಎಂದರೆ ಸರಿ. ಪತ್ರ ತಯಾರಿಸಿದ ಬಗ್ಗೆ ಸಬ್ ರಿಜಿಸ್ಟರ್ ರವರು ನೊಂದಣಿ ಕಾಲಕ್ಕೆ ಸೀಲ್ ಅನ್ನು ಹಾಕುತ್ತಾರೆ ಎಂದರೆ ಸರಿ. ಆ ರೀತಿ ಮಾಡುವಾಗ ಪತ್ರ ಬರೆದುಕೊಡುವವರಿಗೆ ಸಬ್ ರಿಜಿಸ್ಟರ್ ಗೆ ಹೇಳುವ ಅವಕಾಶಗಳು ಇರುತ್ತವೆ ಎಂದರೆ ಸಾಕ್ಷಿ ನಮ್ಮ ತಾಯಿಗೆ ಪ್ರಜ್ಞೆ ಇರುವುದಿಲ್ಲ , ಪ್ರತಿವಾದಿ ಮೋಸ ಮಾಡಿ ನೊಂದಾಣಿ ಮಾಡಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ . ಸಬ್ ರಿಜಿಸ್ಟರ್ ಕಛೇರಿಯಲ್ಲಿ ನೊಂದಾಣಿ ಮಾಡುವಾಗ ಪಕ್ಷಗಾರರ ಪೋಟೋಗಳನ್ನು ತಗೆದುಕೊಳ್ಳುತ್ತಾರೆ ಎಂದರೆ ಸರಿ. ಸಬ್ ರಿಜಿಸ್ಟರ್ ಅವರು ಪೋಟೋ ತಗೆದುಕೊಳ್ಳುವ ಸಂದರ್ಬದಲ್ಲಿ ಪಕ್ಷಗಾರರ ಮನಸ್ಥಿತಿಯನ್ನು ಗಮನಿಸುತ್ತಾರೆ ಎಂದರೆ ಸರಿ. ಒಂದು ವೇಳೆ ಪಕ್ಷಗಾರರ ಮನಸ್ಥಿತಿ ಸರಿಯಿಲ್ಲದೆ ಹೊದರೆ ಸಬ್ ರಿಜಿಸ್ಟರ್ ಅವರು ನೊಂದಾಣಿಯನ್ನು ನಿರಾಕರಿಸುತ್ತಾರೆ ಎಂದರೆ ಸಾಕ್ಷಿ ನಮ್ಮ ತಾಯಿಗೆ ಬಲವಂತವಾಗಿ ಪೊಟೋ ತಗೆಸಿರುತ್ತಾರೆ ಎಂದು ಹೇಳುತ್ತಾರೆ . ದಿ: 03.03.2016 ರಂದು ಈ ಎಲ್ಲಾ ಪ್ರಕ್ರಿಯೆಗಳನ್ನು ಪಾಲನೆ ಮಾಡಿಕೊಂಡು ವಾದಿ 1 ರವರು ಪ್ರತಿವಾದಿ 1 ಮತ್ತು 3 ರವರಿಗೆ ನೊಂದಣಿ ದಾನ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ಸಂದರ್ಬದಲ್ಲಿ ಹಾಜರು ಇಲ್ಲದೇ ಇರುವ ಕಾರಣ ನನಗೆ ಈ ಎಲ್ಲಾ ಪ್ರಕ್ರಿಯೇಗಳು ಪಾಲನೆ ಮಾಡಿರುವ ಬಗ್ಗೆ ಖುದ್ದು ಮಾಹಿತಿ ಇಲ್ಲದಿರುವುದಿಲ್ಲ ಎಂದರೆ ಸರಿ. ನಾನು ದಿ: 03.03.2016 ರ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಪತ್ರವನ್ನು ನಮ್ಮ ತಾಯಿ ದಿ: 03.03.2016 ಪತ್ರವನ್ನು ಯಾವ ಉದ್ದೇಶಕ್ಕಾಗಿ ಪ್ರತಿವಾದಿ 1 ಮತ್ತು 3 ರವರಿಗೇ ನೀಡಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ನನ್ನ ಅಣ್ಣ ಮರಣದ ನಂತರ ಪ್ರತಿವಾದಿಗಳು ನಮ್ಮ ತಾಯಿಯೊಂದಿಗೆ ಅನ್ಯೋನ್ಯವಾಗಿ ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ

ಸರಿಯಲ್ಲ. ನಾನು ಬೆಂಗಳೂರಿನಲ್ಲಿ ವಾಸವಿದ್ದ ಕಾರಣ ಅವಾಗಾವಾಗ ಪ್ರತಿವಾದಿಗಳು ಸಮಯ ಸಿಕ್ಕಲ್ಲಿ ವಾದಿ 1 ರವರನ್ನು ಮಾತನಾಡಿಸಲು ಬರುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 3 ರವರು ಚಿತ್ರದುರ್ಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ಸರಿ. ಪ್ರತಿವಾದಿ 1 ರವರು ತುರುವನೂರು ಗ್ರಾಮದ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಶನಿವಾರದಂದು ಪ್ರತಿವಾದಿಗಳು ಎಲ್ಲಾರು ಸೇರಿ ದಿದ್ದಿಗಿ ಗ್ರಾಮಕ್ಕೆ ಬಂದು ವಾದಿ 1 ರವರ ಜೊತೆ ಒಂದು ದಿನ ಉಳಿದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ನನಗೆ ನೇರವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿ: 03.03.2016 ರಂದು ಆದ ದಾನ ಪತ್ರದ ಪ್ರಕಾರ ಪ್ರತಿವಾದಿ 1 ಮತ್ತು 3 ರವರ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ನಿಪಿ 15 ರ ಪ್ರಕಾರ ಒಟ್ಟು ಕುಟುಂಬದ ಆಸ್ತಿಯಲ್ಲಿ ನನಗೆ ಭಾಗ ನೀಡುವ ಸಲುವಾಗಿ ವಾದಿ 1 ರವರು ನನಗೆ ದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 15 ರ ದಾನಪತ್ರವನ್ನು ಇಲ್ಲಿಯವರೆಗೂ ಸಹ ಪ್ರತಿವಾದಿಗು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ಪ್ರತಿವಾದಿಗಳು ಸದರಿ ದಾನಪತ್ರವನ್ನು ಪ್ರಶ್ನೆ ಮಾಡಿ ದಾವೆ ಸಲ್ಲಿಸಿರುತ್ತಾರೆ . ಸದರಿ ದಾವೆಯ ಸಂಖ್ಯೆ ನನಗೆ ಗೊತ್ತಿರುವುದಿಲ್ಲ . ದಾವಾ ಆಸ್ತಿ ಐಟಂ ನಂಬರ್ 1 ಮತ್ತು 2 ರಲ್ಲಿ ಸರ್ವೆ ನಂಬರ್ 84/3 ರಲ್ಲಿ 2 ಎಕರೆ 28 ಗುಂಟೆ , ಸರ್ವೆ ನಂಬರ್ 5/4 ರಲ್ಲಿ 1 ಎಕರೆ 9 /12 ಗುಂಗೆ ಸರ್ವೆ ನಂಬರ್ 112/5 ರಲ್ಲಿ 33 ಗುಂಟೆ , ಸರ್ವೆ ನಂಬರ್ 112/6 ರಲ್ಲಿ 35 ಗುಂಟೆ ಎಲ್ಲಾವು ಮಲ್ಲಿಕಾರ್ಜುನಪ್ಪ ರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ . ಅವುಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ನನಗೆ ನನ್ನ ತಾಯಿ ನಿಪಿ 15 ರಂತೆ ಮತ್ತು ಪ್ರತಿವಾದಿ 1 ಮತ್ತು 3 ರವರಿಗೆ ದಿ: 03.03.2016 ರ ದಾನಪತ್ರದಂತೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈಗಾಗಲೇ ನನ್ನ ಭಾಗಕ್ಕೆ ಆಸ್ತಿಯನ್ನು ಪಡೆದುಕೊಂಡು ಮಲ್ಲಿಕಾರ್ಜುನಪ್ಪ ರವರ ಕುಟುಂಬದ ಹೊರಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ವಾದಿ 1 ರವರ ಮರಣ ನಂತರ ನಾವು ಹೇಗೆ ವಾರಸುದಾರರು ಹಾಗೇ ಪ್ರತಿವಾದಿಗಳು ಕೂಡ ವಾರಸುದಾರರು ಇರುತ್ತಾರೆ ಎಂದರೆ ಸರಿ. ಸದರಿ ವಿಚಾರ ನನಗೆ ಸಂಪೂರ್ಣವಾಗಿ ತಿಳಿದಿರುತ್ತದೆ ಎಂದರೆ

ಸರಿ. ನಮ್ಮ ತಾಯಿಯ ಮರಣಾ ನಂತರ ಅವರ ವಾರಸುದಾರರಾಗಿ ಕೇವಲ ನನ್ನನ್ನು ಮಾತ್ರ ನ್ಯಾಯಾಲಯಕ್ಕೆ ನೀಡಿರುತ್ತೇವೆ ಎಂದರೆ ಸಾಕ್ಷಿ ಪ್ರತಿವಾದಿಗಳು ಈ ಹಿಂದೆ ದಾವೆಯಲ್ಲಿ ಸೇರಿಸಿರುತ್ತೇವೆ ಎಂದು ಹೇಳುತ್ತಾರೆ . ನಾನು ಬೆಂಗಳೂರಿನಿಂದ ನಮ್ಮ ತವರು ಮನೆಗೆ ಬಂದಾಗ ಪ್ರತಿವಾದಿ 1 ರ ವಿರುದ್ಧ ಚಿತಾವಣೆ ಮಾಡುತ್ತಿದ್ದೇ ಎಂದರೆ ಸರಿಯಲ್ಲ. ದಿ: 18.04.2018 ರಲ್ಲಿ ನಮ್ಮ ತಾಯಿಯನ್ನು ನಮ್ಮ ಪರವಾಗಿ ಹೋಲಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿ ಪ್ರತಿವಾದಿಗಳ ಮೇಲೆ ಇಟ್ಟಿರುವ ಪ್ರೀತಿಯನ್ನು ನಾನು ಚಿತಾವಣೆ ಮಾಡಿ ಅವರ ವಿರುದ್ಧ ಬದಲಾಯಿಸಿರುತ್ತೇನೆ ಎಂದರೆ ಸರಿಯಲ್ಲ. ಸನ್ ಮಾರ್ಚ 2019 ರಲ್ಲಿ ಪ್ರತಿವಾದಿ 1 ರವರವರಿಗೆ ದಿ: 03.03.2016 ರಲ್ಲಿ ಸಿಕ್ಕಿರುವ ಆಸ್ತಿ ಹಾಗೂ ದಾವಾ ಆಸ್ತಿಯ ಐಟಂ ನಂಬರ್ 1 ಆಸ್ತಿಯಲ್ಲಿ ಉಳುವೆ ಮಾಡಲು ನಾವು ಅಡ್ಡಿಪಡಿಸಿ ಬಿಳಿಚೋಡು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕಾನೂನು ಪ್ರಕಾರ ಹಕ್ಕು ಸ್ವಾಧೀನ ಇದ್ದರೂ ಸಹ ನನ್ನ ಚಿತಾವಣೆ ಮೇರೆಗೆ ವಾದಿ 1 ರವರ ಮೂಲಕ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲದೇ ಇರುವುದು ಗೊತ್ತಿದ್ದರು ಸಹ ಪ್ರತಿವಾದಿಗಳಿಂದ ಜಮೀನು ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಯಾವುದೇ ಖುದ್ದು ಮಾಹಿತಿ ಇಲ್ಲದೇ ಇದ್ದರು ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು